# ಬೆಂಗಳೂರು ಜನತೆ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವೇ ಇಲ್ಲ

ಇತ್ತೀಚೆಗೆ ಬೆಂಗಳೂರಿನ ಮೋರಿ ಯೊಂದರಲ್ಲಿ ಕೊಚ್ಚಿ ಹೋದ ಬಾಲಕ ಅಭಿಷೇಕ್ ಸಾವು



ದುರ್ಘಟನೆಯೇ ಸರಿ. ಕಡೇ ಪಕ್ಷ ಇದು ನಮ್ಮ ವ್ಯವಸ್ಥೆಯನ್ನು ಪುನರವಲೋಕಿಸಿಕೊಳ್ಳಲು ಉತ್ತೇಜಿಸಿದರೆ ಒಳಿತು. ಜತೆಗೆ, ನಿಜವಾದ ಚರ್ಚೆ ಆರಂಭವಾಗಬೇಕಿದ್ದು ನಮ್ಮ ಆಡಳಿತ ನಿರ್ವಹಣೆಯ ಲೋಪಗಳ ಬಗ್ಗೆ. ಏನೆ ತಪ್ಪುಗಳಾದರೂ ಕ್ಲೀನ್ ಚಿಟ್ ಕೊಡುವುದು ಮತ್ತು ಇಡೀ ಪ್ರಕರಣವನ್ನು ಮುಚ್ಚಿಹಾಕುವುದರ ಬದಲು ನಗರದ ಆಡಳಿತ ಅಸ್ವಸ್ಥತೆ ಕೊನೆಗೊಳಿಸಲು ಈ ಕ್ಷಣದಿಂದಲೇ ಎಚ್ಚೆತ್ತುಕೊಳ್ಳಲು ಇದು ಸಕಾಲ.

ಅಭಿಷೇಕ್ ಸಾವಿನಂಥ ದುರ್ಘಟನೆ ನಡೆದಾಗ ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು (ನನ್ನನ್ನೂ ಒಳಗೊಂಡಂತೆ) ನಗರದ ಅಭಿವೃದ್ಧಿಯ ಚುಕ್ಕಾಣಿ ಹಿಡಿದಿರುವ ಬೃಹತ್ ಬೆಂಗಳೂರು ನಗರ ಪಾಲಿಕೆಯಂಥ ಆಡಳಿತ ಸಂಸ್ಥೆಯ ಹೊಣೆಗಾರಿಕೆಯನ್ನು ಪ್ರಶ್ನಿಸುವುದು ಸಾಮಾನ್ಯ. ಇದರಲ್ಲಿ ಸಾಮಾನ್ಯವಾದ ಕೋರಿಕೆ, ನಿರೀಕ್ಷೆಗಳಿರುತ್ತವೆಯೇ ಹೊರತು ಬೇರೇನಿಲ್ಲ. ಆದರೆ ಕೆಲವರು ಇವೆಲ್ಲವುಗಳನ್ನು ಮೀರಿ ಮುಂದೆ ಹೋಗಿ ಆಯುಕ್ತರ ರಾಜೀನಾಮೆಗೆ ಒತ್ತಾಯಿಸಿದರು. ಇದನ್ನು ಮೊದಲೇ ತಿಳಿದಿರುವಂತೆ ಆಯುಕ್ತರು ತಮ್ಮ ರಾಜಕೀಯ ಆಪ್ತರ ಬೆಂಬಲದೊಂದಿಗೆ ಆತುರಾತುರವಾಗಿ ಮನ ಬಂದಂತೆ ಕಾರ್ಯಗಳನ್ನು ಕೈಗೆತ್ತಿಕೊಂಡರು. ಅದಕ್ಕೂ ತೃಪ್ತರಾಗದೇ ಇದ್ದಾಗ ನೌಕರರ ಸಂಘಟನೆಗಳನ್ನು ತಮ್ಮ ಹಿತಕ್ಕಾಗಿ ಬಳಸಿಕೊಂಡರು. ಇಷ್ಟೆಲ್ಲಾ ಆದರೂ ನಮ್ಮ ಮುಖ್ಯಮಂತ್ರಿಗಳು ಅವರಿಗೆ ನಿರ್ದೋಷಿ ಎಂಬ ಪ್ರಮಾಣ ಪತ್ರ ಕೊಟ್ಟದ್ದು ಆಶ್ಚರ್ಯಕರ ಸಂಗತಿ.

ಇಲ್ಲಿ ಎಳೆಯ ಹುಡುಗ ಅಭಿಷೇಕನ ಮರಣ ನಮಗೆಲ್ಲಾ ದುರಂತವಾಗಿ ಮಾತ್ರ ಕಾಣುತ್ತಿಲ್ಲ. ಘಟನೆಯ ನಂತರ ನಗರ ಆಡಳಿತ ಯಂತ್ರವನ್ನು ಮುನ್ನಡೆಸುತ್ತಿರುವವರು ತೆಗೆದುಕೊಂಡ ವಿವೇಚನಾ ರಹಿತ ಕ್ರಮ, ವರ್ತನೆಗಳೂ ಕೂಡ ಅವನ ಸಾವಿನಷ್ಟೇ ಘೋರವಾಗಿ ರಾಚುತ್ತಿದೆ. ಅವು ಜನರ ನೀರೀಕ್ಷೆಗಳನ್ನು ಹೊಸಕಿ ಹಾಕಿವೆ. ರಾಜ್ಯದ ಸರಕಾರ ಅತ್ಯುತ್ತಮ ಆಡಳಿತದ ಮೂಲಕ ಮಾದರಿ ಎನಿಸಿಕೊಳ್ಳಲು ಉತ್ತರದಾಯಿತ್ವ ಹಾಗೂ ಪಾರದರ್ಶಕತೆಗಳೆರಡೂ ಆಧಾರ ಸ್ತಂಭಗಳು. ಈ ನಿಟ್ಟಿನಲ್ಲಿ ಬಿಜೆಪಿ ಸರಕಾರ ಎಡವಿದಂತಿದೆ. ಜನರ ಹಿತಾಸಕ್ತಿ ಹೆಚ್ಚುತ್ತಿದೆಯಾದರೂ ಅದಕ್ಕೆ ಪೂರಕವಾಗಿ ಸರಕಾರ ಸ್ಪಂದಿಸುತ್ತಿಲ್ಲ. ಯಡಿಯೂರಪ್ಪನವರು ಕ್ಲೀನ್ ಚಿಟ್ ಕೊಡುವ ಬದಲಾಗಿ ನನಗೆ ತಿಳಿದಂತೆ ಈ ಕೆಲಸ ಮಾಡಬಹುದು.

1. ದುರ್ಘಟನೆ ಏಕೆ ಸಂಭವಿಸಿತು, ಅದಕ್ಕೆ ಕಾರಣಗಳೇನು ಎಂಬುದನ್ನು ತಿಳಿದುಕೊಳ್ಳಲು ತನಿಖೆ ನಡೆಸಬೇಕು. ಇದು ವ್ಯವಸ್ಥೆಯ ತಪ್ಪುಗಳ ಆತ್ಮಾವಲೋಕನಕ್ಕೆ ದಾರಿಯಾಗುತ್ತದೆ. ದುರ್ಘಟನೆಗಳ ಪುನರಾವರ್ತನೆಯನ್ನು ತಪ್ಪಿಸಲು ಆತ್ಮಸಂಧಾನವೊಂದೇ ಪರಿಹಾರ. ಹಿಂದೆ ಸಂಸತ್‌ನಲ್ಲಿ ಬಿಜೆಪಿ ಸರಕಾರ 26/11ರ ಭಯೋತ್ಪಾದನೆಗೆ ಘಟನೆಗೆ ಸಂಬಂಧಿಸಿದಂತೆ ತನಿಖೆಗೆ ಒತ್ತಾಯಿಸಿತು. ಅಭಿಷೇಕ್‌ನ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ ಮಾನದಂಡವನ್ನು ನಿಗದಿ ಮಾಡಲು ಏಕೆ ಸಾಧ್ಯವಿಲ್ಲ ಎನ್ನುವುದಕ್ಕೆ ಪೂರಕವಾದ ಕಾರಣಗಳೇ ಇಲ್ಲ.

2. ತನಿಖಾ ವರದಿಯ ಆಧಾರದ ಮೇಲೆ ಸಮಸ್ಯೆಯ ಪರಿಹಾರಕ್ಕೆ ಯೋಜನೆ ಹೆಣೆಯಬೇಕು. ಅದನ್ನು ಜಾರಿಗೊಳಿಸುವ ಮೂಲಕ ಹಳೆಯ ಸಮಸ್ಯೆಗಳಿಗೆ ಪರಿಹಾರ ಹಾಗೂ ಮಳೆ ನೀರು ಹೊತ್ತೊಯ್ಯುವ ರಾಜಕಾಲುವೆ ಸಮಸ್ಯೆಗಳ ನಿವಾರಣೆಗೆ ಹೆಚ್ಚು ಒತ್ತು ಕೊಡಬೇಕು. ಇದರಿಂದ ದುರ್ಘಟನೆಗಳು ಎಂದಿಗೂ ಮರುಕಳಿಸುವುದಿಲ್ಲ.

3. ಸಾರ್ವಜನಿಕ ಹಿತಾಸಕ್ತ ಸಂಸ್ಥೆಗಳೊಂದಿಗೆ ಸರಕಾರ ಕೈ ಜೋಡಿಸುವ ಮೂಲಕ ನೈತಿಕ ಬೆಂಬಲ ಗಳಿಸಿಕೊಳ್ಳಬೇಕು. ಇದರಲ್ಲಿ ಬಡವ-ಶ್ರೀಮಂತ ಎನ್ನುವ ಯಾವ ಉದಾಸೀನಕ್ಕೂ ಅವಕಾಶ ಇರಕೂಡದು. ಏಕೆಂದರೆ, ಪಬ್ ದಾಳಿಯಂತಹ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಕಾರ ಬೆಂಗಳೂರು ಜನರ ನೈತಿಕ ಬೆಂಬಲ ಕಳೆದುಕೊಂಡಿತು.

ನನಗೆ ಅನ್ನಿಸಿದಂತೆ ಆಯುಕ್ತರಿಗೆ ಮುಖ್ಯಮಂತ್ರಿಗಳು 'ದೋಷಮುಕ್ತ' ಪ್ರಮಾಣ ಪತ್ರವನ್ನು ಹಿಂಜರಿಕೆಯಿಂದಲೇ ಕೊಟ್ಟಿದ್ದಾರೆ. ಆದರೂ ಇದು ಸೂಕ್ತವಲ್ಲ. ಉತ್ತರದಾಯಿತ್ವ ತತ್ತ್ವಗಳಿಗೆ ವಿರುದ್ಧವಾಗಿದೆ. ಬೆಂಗಳೂರಿನ ಜನತೆ ತಮ್ಮ ಹಿತಾಸಕ್ತಿಯನ್ನು ಕಾಪಾಡುವ ಸರಕಾರ ಅಸ್ತಿತ್ವಕ್ಕೆ ಬರಲಿ ಅಪೇಕ್ಷಿಸಿದ್ದರು. ಅದಕ್ಕೆ ತಕ್ಕಂತೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿದರು. ಕಳೆದ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಬಿಡುಗಡೆ ಮಾಡಿದ 'ನಮ್ಮ ಬೆಂಗಳೂರು ಕ್ರಿಯಾ ಯೋಜನೆ' ಮೂಲಕ ಜನರ ಈ ಅಭಿಲಾಷೆಯನ್ನು ಪೂರೈಸುವ ಆಶ್ವಾಸನೆಯನ್ನು ನೀಡಿತು. ಈಗ ಯಡಿಯೂರಪ್ಪನವರಿಗೆ ಹೇಳಿದಂತೆ ನಡೆದು ಕೊಳ್ಳಬೇಕಾಗಿರುವುದರಿಂದ ಇಂದು ಅಭಿಷೇಕ್ ಪ್ರಕರಣ 'ಸತ್ವಪರೀಕ್ಷೆ'ಯಂತಾಗಿದೆ.

ಸ್ವತಃ ಬೆಂಗಳೂರು ಅಭಿವೃದ್ಧಿ ಕ್ರಿಯಾ ಯೋಜನೆಯ ಅಧ್ಯಕ್ಷರಾಗಿರುವ ಹಾಗೂ ನಗರ ಅಭಿವೃದ್ಧಿಯ ಬಗ್ಗೆ ದೂರದೃಷ್ಟಿ ಹೊಂದಿರುವ ಮುಖ್ಯಮಂತ್ರಿ ಯಡಿಯೂರಪ್ಪನವರು ಈ ಹಿಂದೆ ಅಧಿಕಾರಿಗಳು ಇಂಥ ಪ್ರಕರಣಗಳನ್ನು ಮುಚ್ಚಿಹಾಕಿದಂತೆ ಈ ಪ್ರಕರಣವನ್ನೂ ಹಾಗೆ ಮಾಡಲು ಬಿಡುವುದಿಲ್ಲ ಎಂದುಕೊಳ್ಳುತ್ತೇನೆ. ಅಭಿಷೇಕ್ ಕುಟುಂಬಕ್ಕೆ ಪರಿಹಾರ ರೂಪದಲ್ಲಿ ನೀಡಿದ ಒಂದು ಲಕ್ಷ ರೂ. ಏನೇನೂ ಸಾಲದು. ಆಡಳಿತದ ಆಂತರ್ಯದ ಸಮಸ್ಯೆಗಳು, ದುರ್ಘಟನೆಗಳ ಬೇರಿನಂತಿರುವ ಅಧಿಕಾರಿಗಳ ಉದಾಸೀನತೆಯನ್ನು ಈ ರೀತಿ ಪರಿಹಾರ ಕೊಡುವುದರಿಂದ ನಿರ್ಮೂಲನೆಗೊಳಿಸಲಾಗುವುದಿಲ್ಲ.

ಅಭಿಷೇಕ್ ಘಟನೆಗೆ ಸಂಬಂಧಿಸಿದಂತೆ ಕೆಲವರು ಯಾವ ಉದ್ದೇಶ, ದೃಷ್ಟಿಕೋನದಿಂದ ಆಯುಕ್ತರನ್ನು ರಾಜೀನಾಮೆಗೆ ಒತ್ತಾಯಿಸುತ್ತಿದ್ದಾರೋ ಗೊತ್ತಿಲ್ಲ. ಅದು ಆಯುಕ್ತರ ಹಾಗೂ ಅವರ ಬೆಂಬಲಿಗರ ವಿವೇಚನೆಗೆ ಬಿಟ್ಟದ್ದು. ಆದರೆ ಒಂದಂತೂ ಸತ್ಯ. ಸರಕಾರದ ಅದಕ್ಷ ಹಾಗೂ ಬೇಜವಾಬ್ದಾರಿತನದ ಪರಿಣಾಮದಿಂದ ಮತ್ತೊಮ್ಮೆ ಅಭಿಷೇಕ್ ಸಾವಿನಂಥ ಘಟನೆ ಮರುಕಳಿಸಿದರೆ ನಾನು ಹಾಗೂ ಅಸಂಖ್ಯಾತ ಬೆಂಗಳೂರು ಜನತೆ ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವೇ ಇಲ್ಲ.

**ರಾಜೀವ್ ಚಂದ್ರಶೇಖರ್**
ರಾಜ್ಯಸಭೆ ಸದಸ್ಯರು

**ಬೆಂಗಳೂರಿನ ಜನತೆ ತಮ್ಮ ಹಿತಾಸಕ್ತಿಯನ್ನು ಕಾಪಾಡುವ ಸರಕಾರ ಅಸ್ತಿತ್ವಕ್ಕೆ ಬರಲಿ ಅಪೇಕ್ಷಿಸಿದ್ದರು. ಅದಕ್ಕೆ ತಕ್ಕಂತೆ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಿದರು. ಕಳೆದ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಬಿಡುಗಡೆ ಮಾಡಿದ 'ನಮ್ಮ ಬೆಂಗಳೂರು ಕ್ರಿಯಾ ಯೋಜನೆ' ಮೂಲಕ ಜನರ ಈ ಅಭಿಲಾಷೆಯನ್ನು ಪೂರೈಸುವ ಆಶ್ವಾಸನೆಯನ್ನು ನೀಡಿತು. ಈಗ ಯಡಿಯೂರಪ್ಪನವರಿಗೆ ಹೇಳಿದಂತೆ ನಡೆದು ಕೊಳ್ಳಬೇಕಾಗಿರುವುದರಿಂದ ಇಂದು ಅಭಿಷೇಕ್ ಪ್ರಕರಣ 'ಸತ್ವಪರೀಕ್ಷೆ'ಯಂತಾಗಿದೆ.**